ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 9-18
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಇ–ಆಡಳಿತ ಬಳಕೆಯಲ್ಲಿ ಗ್ರಾಮೀಣ ಪ್ರದೇಶದ ಜನರು ಎದುರಿಸುತ್ತಿರುವ ಸವಾಲು ಮತ್ತು ಸಾಧ್ಯತೆಗಳು

**ನಾಗರಾಜ ಡಿ.ಓ**
ಸಂಶೋಧನ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

***Abstract:***
*ಆಧುನಿಕ ಪ್ರಜಾತಂತ್ರ ವಿಚಾರವು ಆಡಳಿತವನ್ನು ಮತ್ತು ಸರ್ಕಾರದ ಸಂಸ್ಥೆಗಳನ್ನು ಜನಾನುರಾಗಿ ಮತ್ತು ಜನಸ್ನೇಹಿ ಫಲಿತಾಂಶ ನಿರೀಕ್ಷಿಸುವ ವ್ಯವಸ್ಥೆಯಾಗಿದ್ದ ಮಾತ್ರಕ್ಕೆ ಅದು ಪ್ರಜಾಪ್ರಭುತ್ವ ಪರಿಕಲ್ಪನೆಯ ನೈಜ್ಯ ಸತ್ವ ಮತ್ತು ಗುಣವನ್ನು ಹೊಂದಿದಂತಾಗುವುದಿಲ್ಲ. ಸರಳವಾಗಿ ಹೇಳುವುದಾದರೆ ಸಂವಿಧಾನಾತ್ಮಕವಾಗಿ ನೀತಿ ನಿರೂಪಣೆಗಳನ್ನು ಅನುಷ್ಠಾನಗೊಳಿಸಿದರೆ ಜನರಿಗೆ ನ್ಯಾಯ, ಸಮಾನತೆ ಮತ್ತು ಹಕ್ಕುಗಳನ್ನು ದೊರಕಿಸಿದಂತಾಗುವುದಿಲ್ಲ. ಆದ್ದರಿಂದ ಪ್ರಜಾಪ್ರಭುತ್ವ ಸಂಸ್ಥೆಗಳು ಮತ್ತು ಆಡಳಿತ ಯಂತ್ರವು ನಾವೀನ್ಯ ತಂತ್ರಜ್ಞಾನ ಮತ್ತು ಪರಿಣಾಮಕಾರಿ ವಿಧಾನಗಳ ಮೂಲಕ ನಿರಂತರ ವಿಕಾಸಶೀಲ ಆಲೋಚನೆಗಳ ಮೂಲಕ ಸಂವಿಧಾನದ ಉದ್ದೇಶಗಳನ್ನು ಸಾಕಾರಗೊಳಿಸಬೇಕಿದೆ. ಜಾಗತೀಕರಣದ ಕಾಲಘಟ್ಟದಲ್ಲಿ ಅನೇಕ ರಾಜಕೀಯ ಮತ್ತು ಆರ್ಥಿಕ, ಜಾಗತಿಕ ಬದಲಾವಣೆಗಳನ್ನು ನಾವು ಸಾಕ್ಷೀಕರಿಸುತ್ತಿದ್ದು, ಇದಕ್ಕೆ ತಕ್ಕಂತೆ ಆಡಳಿತ ವ್ಯವಸ್ಥೆಯಲ್ಲಿ ಕೆಲವೊಂದು ತಾಂತ್ರಿಕ ಬದಲಾವಣೆಗಳನ್ನು ಅನುಷ್ಠಾನ ಮಾಡುವ ಅಗತ್ಯತೆ ಇದೆ. ಆಡಳಿತ ಎನ್ನುವುದನ್ನು ಜಾಗತೀಕರಣ, ಖಾಸಗೀಕರಣ ಇವುಗಳ ಹಿನ್ನೆಲೆಯಲ್ಲಿ ನೋಡಿದಾಗ ಜಗತ್ತಿನ ಎಲ್ಲಾ ಸರ್ಕಾರಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಇ–ಆಡಳಿತ ಮಾರ್ಗದಲ್ಲಿ ನಿರ್ವಹಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿರುವುದನ್ನು ಕಾಣಬಹುದು.*

***Keywords:*** *ಗ್ರಾಮೀಣ ಪ್ರದೇಶ, ಇ–ಆಡಳಿತ, ಎಲೆಕ್ಟ್ರಾನಿಕ್ ಮಾಧ್ಯಮ, ನೈರ್ಮಲ್ಯ, ವಸತಿ, ಕುಡಿಯುವ ನೀರು.*

**ಪೀಠಿಕೆ**

ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳು ಮಾಹಿತಿ ಮತ್ತು ತಂತ್ರಜ್ಞಾನ ಆವಿಷ್ಕಾರದಿಂದ ಕಲ್ಯಾಣ ರಾಷ್ಟ್ರಗಳ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಆಡಳಿತ ವ್ಯವಸ್ಥೆಯಲ್ಲಿ ಇ–ಆಡಳಿತ ಬಳಸುತ್ತಿವೆ. ಇ–ಆಡಳಿತವು ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ನಡೆಸುವ ಆಡಳಿತ ವ್ಯವಸ್ಥೆಯಾಗಿದೆ. ಡಿಜಿಟಲ್ ಕ್ಷೇತ್ರದಲ್ಲಿನ ಪ್ರಗತಿಯಿಂದ ಸಂಪ್ರಾದಾಯಿಕ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದಂತೆ ಅನೇಕ ಬದಲಾವಣೆಗಳನ್ನ ಕಾಣಬಹುದಾಗಿದೆ. ಪ್ರಸ್ತುತ ಕಾಲಘಟ್ಟದಲ್ಲಿ ಮಾನವನು ತಂತ್ರಜ್ಞಾನದ ನಡುವೆ ನಿಕಟ ಸಂಬಂಧವನ್ನು ಹೊಂದಿದ್ದಾನೆ. ಈ ಮೂಲಕ ರಾಷ್ಟ್ರಗಳು ಉತ್ತಮ ಆಡಳಿತವನ್ನು ತೀವ್ರಗೊಳಿಸಲು ಆಡಳಿತ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ಇ–ಆಡಳಿತವನ್ನು ನಿರಂತರವಾಗಿ ಪರಿಚಯಿಸುತ್ತಾ ಬಂದಿವೆ. ಜನರು ಅಕ್ಷರ ಜ್ಞಾನ ಇಲ್ಲದ ಸಮಾಜದಿಂದ ಅಕ್ಷರ ಜ್ಞಾನ ಪಡೆಯುತ್ತಾ ಹೇಗೆ ಇ–ಆಡಳಿತಕ್ಕೆ

***Please cite this article as:*** ನಾಗರಾಜ ಡಿ.ಓ. (2024). ಇ–ಆಡಳಿತ ಬಳಕೆಯಲ್ಲಿ ಗ್ರಾಮೀಣ ಪ್ರದೇಶದ ಜನರು ಎದುರಿಸುತ್ತಿರುವ ಸವಾಲು ಮತ್ತು ಸಾಧ್ಯತೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 3(4), 9–18

ಹೊಂದಿಕೊಳ್ಳುತ್ತಿದ್ದಾರೆ? ಇ–ಆಡಳಿತ ಬಳಕೆಯ ಸಂದರ್ಭದಲ್ಲಿ ಗ್ರಾಮೀಣ ಜನರು ಎದುರಿಸುತ್ತಿರುವ ಸಮಸ್ಯೆಗಳೇನು? ಮತ್ತು ಅವುಗಳ ಸವಾಲುಗಳೇನು? ಎಂಬಿತ್ಯಾದಿ ವಿಷಯಗಳನ್ನು ಈ ಲೇಖನದಲ್ಲಿ ಚರ್ಚಿಸಿದ್ದೇನೆ.

ಗ್ರಾಮೀಣ ಪ್ರದೇಶದ ಜನರು ಇ–ಆಡಳಿತವನ್ನು ಹೇಗೆ ಬಳಸುತ್ತಿದ್ದಾರೆ? ಅದರ ಸಾಧಕಬಾದಕಗಳೇನು? ಎನ್ನುವುದನ್ನು ತಿಳಿಯಬೇಕಾದ ಅವಶ್ಯಕತೆ ಇದೆ. ಸರ್ಕಾರಗಳು ಆಡಳಿತ ವ್ಯವಸ್ಥೆಯಲ್ಲಿ ಇ–ಆಡಳಿತದ ಕಾರ್ಯ ತಂತ್ರಗಳನ್ನು ಕಾಲಕಾಲಕ್ಕೆ ಪರಿಚಯಿಸುತ್ತಿವೆ. ಅದರೆ ಸಾಮಾನ್ಯ ಜನರಿಗೆ ಮತ್ತು ಅಧಿಕಾರಿಗಳಿಗೆ ಇ–ಆಡಳಿತದ ಕಾರ್ಯತಂತ್ರಗಳ ಬಳಕೆಯ ಬಗ್ಗೆ ಸರಿಯಾಗಿ ಮಾಹಿತಿ ಇರುವುದಿಲ್ಲ. ಇ–ಆಡಳಿತವು ಜನರಿಗೆ ಸುಲಭವಾಗಿ ತಲುಪುತ್ತಿದೆ ಎಂದು ಹೇಳುವುದು ಕಷ್ಟಸಾಧ್ಯ. ಸರ್ಕಾರಗಳು ಅನೇಕ ನಾಗರಿಕ ಸೇವೆಗಳನ್ನು ಮೂಲಸೌಕರ್ಯ ಬಳಸಿಕೊಂಡು ಇ–ಆಡಳಿತ ಕಾರ್ಯತಂತ್ರಗಳನ್ನು ಜನರಿಗೆ ತಲುಪಿಸಲು ಕ್ರಮಕೈಗೊಂಡಿವೆ. ಅವುಗಳಲ್ಲಿ ಕೆಲವು ಯಶಸ್ವಿಯಾಗಿದ್ದರೆ, ಮತ್ತೆ ಕೆಲವು ವಿಫಲವಾಗಿವೆ. ಇದಕ್ಕೆ ಜನರ ಇ–ಆಡಳಿತದ ಬಳಕೆಯ ಅರಿವಿನ ಕೊರತೆಯೇ ಪ್ರಮುಖ ಕಾರಣವಾಗಿರುತ್ತದೆ. ಜೊತೆಗೆ ಅಧಿಕಾರಿ ವರ್ಗದವರ ನಿರಾಸಕ್ತಿಯು ಒಂದು ಎನ್ನಬಹುದು. ಗ್ರಾಮೀಣ ಪ್ರದೇಶದ ಜನರ ಶಿಕ್ಷಣವು ಕಡಿಮೆ ಪ್ರಮಾಣದಲ್ಲಿರುವುದರಿಂದ ಜನರು ಇ–ತಂತ್ರಜ್ಞಾನದ ಆಡಳಿತವನ್ನು ಬಹುಬೇಗ ಸ್ವೀಕರಿಸುವುದು ಕಷ್ಟ ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ. ಗ್ರಾಮೀಣ ಜನರಲ್ಲಿ ಕಂಪ್ಯೂಟರ್ ಸಾಕ್ಷರತೆಯ ಕೊರತೆ ಮತ್ತು ಇ–ಉಪಕರಣಗಳ ಕೊರತೆ ಕಂಡುಬರುತ್ತದೆ. ಇದಕ್ಕೆ ಗ್ರಾಮೀಣ ಭಾಗದ ಜನರು ಆರ್ಥಿಕವಾಗಿ ಸಬಲರಾಗಿಲ್ಲದಿರುವುದು ಕಾರಣವಾಗಿದೆ.

ಮಾರೆಕ್ ಮತ್ತು ಇತರರ (2017) ಪ್ರಕಾರ ಸ್ಮಾರ್ಟ್ ಮತ್ತು ಉದಯೋನ್ಮುಖ ತಂತ್ರಜ್ಞಾನಗಳು ಪರಿಣಾಮಕಾರಿ ಆಡಳಿತವನ್ನು ನಡೆಸುತ್ತವೆ" ಎಂದ್ದಾರೆ. ಉದಾಹರಣೆಗೆ, ಆಡಳಿತ ಮತ್ತು ಇ–ತಂತ್ರಜ್ಞಾನದ ನಡುವೆ ನೇರ ಹಾಗೂ ಎರಡು ಬದಿಯ ಕೊಂಡಿಗಳನ್ನು ಸ್ಥಾಪಿಸಿರುವುದನ್ನು ಗುರುತಿಸಿದ್ದಾರೆ.

ದೇವಯ್ಯ ಎನ್.ಜಿ ಮತ್ತು ಕೀರ್ತಿರಾಜ್. (2021) ಇವರು ತಮ್ಮ "ಇ–ಗೌರ್ನೆನ್ಸ್ ಇನ್ ಇಂಡಿಯಾ" ಎಂಬ ಗ್ರಂಥದಲ್ಲಿ ಇ–ಆಡಳಿತ ಸೇವೆಗಳ ಜ್ಞಾನವು ಸಂಪೂರ್ಣವಾಗಿ ನಾಗರಿಕರ ವಯಸ್ಸು, ಶಿಕ್ಷಣ, ಉದ್ಯೋಗ ಮತ್ತು ಇಂಟರ್ನೆಟ್ ಸಾಕ್ಷರತೆಯ ನಿಯತಾಂಕಗಳನ್ನು ಅವಲಂಬಿಸಿರುತ್ತದೆ. ಇ–ಆಡಳಿತ ವ್ಯವಸ್ಥೆಯಿಂದ ತೃಪ್ತನಾದ ನಾಗರಿಕನು ದೃಢವಾದ ಆಡಳಿತವನ್ನು ನಡೆಸಲು ಸರ್ಕಾರಕ್ಕೆ ಹೆಚ್ಚು ಮುಖ್ಯವಾಗಿದೆ. ಇ–ಆಡಳಿತ ಸೇವೆಗಳು ನಾಗರಿಕರಿಗೆ ಸರ್ಕಾರದೊಂದಿಗೆ ನೇರವಾಗಿ ಸಂವಹನ ನಡೆಸಲು ಮತ್ತು ಸರ್ಕಾರದ ನೀತಿಗಳನ್ನು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ.

ಮೇನಕ ತಮ್ಮಯ್ಯ (2023) ರವರು ತಮ್ಮ "ಇ–ಗೌರ್ನೆನ್ಸ್ ಇನಿಟಿಯೆಟಿವ್ಸ್ ಇನ್ ಕರ್ನಾಟಕ ಎ ಕೇಸ್ ಸ್ಟಡೀಸ್ ಆಫ್ ಭೂಮಿ ಪ್ರಾಜೆಕ್ಟ್ ಇನ್ ಕೊಡಗು ಡಿಸ್ಟ್ರಿಕ್" ಎಂಬ ಗ್ರಂಥದಲ್ಲಿ ಇ–ಆಡಳಿತವು ಆಡಳಿತದ ಗುಣಮಟ್ಟದ ದಕ್ಷತೆ ಮತ್ತು ಆಡಳಿತದ ಪರಿಣಾಮಕಾರಿತ್ವಕ್ಕೆ ತಂತ್ರಜ್ಞಾನವು ಪ್ರಮುಖ ಶಕ್ತಿಯಾಗಿ ಗುರುತಿಸಲ್ಪಟ್ಟಿದೆ. ಇ–ಆಡಳಿತವನ್ನು ಸರ್ಕಾರದ ಮಾಹಿತಿಯನ್ನು ಸರಳ ಕಾರ್ಯನಿರ್ವಹಣೆಯ ಅನ್ವಯ, ನೈತಿಕ, ಸಂಚಯಿಸ ಬಹುದೆಂದು ವ್ಯಾಖ್ಯಾನಿಸಿದ್ದಾರೆ. ದೇಶದ ಗ್ರಾಮೀಣ ಜನರು ಇ–ಆಡಳಿತದ ಬಳಕೆ ಬಗ್ಗೆ ಸಂಪೂರ್ಣವಾದ ಜ್ಞಾನವನ್ನು ಪಡೆದಿರುವುದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಜನರು ಈವರಿಗೂ ಸಂಪೂರ್ಣ ಸಾಕ್ಷರತೆಯ ಪ್ರಮಾಣವನ್ನು ಸಾಧಿಸಿರುವುದಲ್ಲ. ಆದ್ದರಿಂದ ಗ್ರಾಮೀಣ ಜನರಲ್ಲಿ ಇ–ಆಡಳಿತದ ಮಾಹಿತಿ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಗಳ ಬಳಕೆಯಲ್ಲಿ ಸಾಕಷ್ಟು ಸುಧಾರಣೆಯಾಗ ಬೇಕಾಗಿದೆ. ಗ್ರಾಮೀಣ ಜನರು ಸರ್ಕಾರವು

ಅನುಷ್ಠಾನಕ್ಕೆ ತಂದ ಇ–ಆಡಳಿತದಿಂದ ಸಾಕಷ್ಟು ಸವಾಲು ಮತ್ತು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೆಲವೊಂದಿಷ್ಟು ಜನರಿಗೆ ಇ–ಆಡಳಿತದ ಪ್ರಾಥಮಿಕ ಜ್ಞಾನವು ಸಹ ಲಭ್ಯವಿರುವುದಿಲ್ಲ ಎಂದು ತಜ್ಞರ ಅಭಿಪ್ರಾಯವಾಗಿದೆ. ಅಂದರೆ ಕಂಪ್ಯೂಟರ್ ಮತ್ತು ಇಂಟರ್ನೆಟ್ ಬಳಕೆಯ ಜ್ಞಾನ ಇಲ್ಲದಿರುವುದು ಕಾಣಬಹುದಾಗಿದೆ. ಯಾವ ಇಲಾಖೆಯಲ್ಲಿ ಯಾವ ತಂತ್ರಾಂಶಗಳನ್ನು ಅಳವಡಿಸಿದ್ದಾರೆ. ಅವುಗಳಲ್ಲಿ ಯಾವ ನಾಗರಿಕ ಸೇವೆಗಳು ಲಭಿಸುತ್ತವೆ? ಅವುಗಳು ಯಾವ ಇಲಾಖೆ ಅಡಿಯಲ್ಲಿ ಬರುತ್ತವೆ? ಅವುಗಳ ಕಾರ್ಯಕ್ಷಮತೆ ಎಷ್ಟು? ಅವುಗಳನ್ನ ಯಾರು ನಿರ್ವಹಣೆ ಮಾಡುತ್ತಾರೆ? ಎಂಬಿತ್ಯಾದಿ ಇ–ಆಡಳಿತದ ವಿಷಯಜ್ಞಾನದ ಕೊರತೆ ಕಂಡುಬರುತ್ತದೆ.

ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಉತ್ತಮ ಆಡಳಿತವನ್ನು ನೀಡಲು ಗ್ರಾಮೀಣ ಪ್ರದೇಶದಲ್ಲಿ ಇ–ಆಡಳಿತದ ಪರಿಕರಗಳನ್ನು ನೀಡುವುದರ ಮೂಲಕ ಆಡಳಿತದಲ್ಲಿ ಭಾಗವಹಿಸುವಂತೆ ಪ್ರೇರೇಪಿಸ ಬೇಕಾಗಿರುತ್ತದೆ. ಗ್ರಾಮೀಣ ಬುಡಕಟ್ಟು ಜನರು ಇತ್ತೀಚಿನ ದಶಕಗಳಲ್ಲಿ ನಾಗರಿಕ ಸಮಾಜದೊಂದಿಗೆ ಸಂಬಂಧವನ್ನು ಹೊಂದಿರುತ್ತಾರೆ. ಇವರು ನಿಧಾನವಾಗಿ ನಾಗರೀಕತೆಯ ಬೆಳವಣಿಗೆಯನ್ನ ಸ್ವೀಕರಿಸುತ್ತಿರುವ ಸಂದರ್ಭದಲ್ಲಿ, ಕೂಡಲೇ ಇ–ಆಡಳಿತ ಅಳವಡಿಕೆ ಮತ್ತು ಅದರ ಉಪಯೋಗ ಈ ಸಮುದಾಯಗಳಿಗೆ ಕಷ್ಟ ಸಾಧ್ಯವಾಗುತ್ತದೆ. ಏಕೆಂದರೆ ಗ್ರಾಮೀಣ ಜನರಿಗೆ ಕಂಪ್ಯೂಟರ್ ಸಾಕ್ಷರ ಜ್ಞಾನ, ಕಂಪ್ಯೂಟರ್ ಕೌಶಲ್ಯಗಳು, ಮೊಬೈಲ್ ಅಪ್ಲಿಕೇಶನ್ಗಳು ಪರಿಚಯ ಇರುವುದಿಲ್ಲ. ಅದು ಇದ್ದರೆ ಕೆಲ ಇತ್ತೀನ ತಾಂತ್ರಿಕ ಹಾಗೂ ಪದವಿ ಶಿಕ್ಷಣ ಪಡೆದವರು ಯುವ ಪೀಳಿಗೆ ಮಾತ್ರ. ಹಾಗಾಗಿ ಗ್ರಾಮೀಣ ಪ್ರದೇಶದ ಜನರು ಇ–ಆಡಳಿತವನ್ನು ಸಮರ್ಪಕವಾಗಿ ಬಳಸುವಲ್ಲಿ ಹಿನ್ನಡೆಯನ್ನು ಅನುಭವಿಸುತ್ತಾರೆ.

ಗ್ರಾಮೀಣ ಪ್ರದೇಶದ ಕೆಲವೊಂದು ಜನರಿಗೆ ಸರ್ಕಾರದ ಆಡಳಿತ ಮಾಹಿತಿಯನ್ನು ತಲುಪಿಸಲು ಇಂಟರ್ನೆಟ್ ಮತ್ತು ವರ್ಲ್ಡ್ ವೈಡ್ ವೆಬ್‌ನ್ನು ಬಳಸುತ್ತಾರೆ ಎನ್ನುವ ಸಾಮಾನ್ಯ ವಿಷಯ ತಿಳಿದಿರುವುದಿಲ್ಲ. ಕೆಲವೊಂದು ಇಲಾಖೆಗಳಲ್ಲಿ ಈ ಮಾಹಿತಿ ಮತ್ತು ಸಂವಹನ ಸೇವಾ ಕೇಂದ್ರಗಳ ಮೂಲಕ ಇ–ಆಡಳಿತವನ್ನು ನೀಡುತ್ತಾರೆ. ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಜನರಿಗೆ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳು ನಾಗರಿಕರಿಗೆ ಆಡಳಿತ ಸೇವೆಗಳನ್ನ ಇ–ಆಡಳಿತದ ಮೂಲಕ ತಲುಪುವಂತೆ ಮಾಡುತ್ತವೆ. ವೃದ್ಯಾಪ್ಯ ವೇತನ ಗಳಿಂದ ಹಿಡಿದು ಇಂದಿನ ಸರ್ಕಾರದ ಯೋಜನೆಗಳಾದ ಗೃಹಲಕ್ಷ್ಮಿ ಮತ್ತು ಗೃಹಜೋತಿ ಯೋಜನೆಗಳವರೆಗೂ ಇ–ಆಡಳಿತ ವಿಸ್ತಾರಿಸಲಾಗಿದೆ ಎನ್ನುವ ಸಾಮಾನ್ಯ ಮಾಹಿತಿ ಇರುವುದಿಲ್ಲ.

ಭಾರತದ ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಸಹ ಸರಿಯಾದ ನೆಟ್ವರ್ಕಿಂಗ್ ವ್ಯವಸ್ಥೆ ಹಾಗೂ ಬ್ರಾಡ್ ಬ್ಯಾಂಡ್ ವ್ಯವಸ್ಥೆಗಳು ಲಭ್ಯವಿಲ್ಲದ ಕಾರಣ ಇ–ಆಡಳಿತವನ್ನು ಸುಗಮವಾಗಿ ಬಳಸಲು ಜನಸಾಮಾನ್ಯರಿಗೆ ತೊಂದರೆ ಆಗುತ್ತಿದೆ. ಅದೇ ರೀತಿಯಾಗಿ ಗ್ರಾಮೀಣ ಪ್ರದೇಶದ ಗ್ರಾಮ ಪಂಚಾಯಿತಿಗಳಲ್ಲಿ ಇ–ಆಡಳಿತವನ್ನು ಸುಗಮವಾಗಿ ನಡೆಸಲು ಉತ್ತಮ 5ಉ ನೆಟ್ವರ್ಕಿಂಗ್ ಅಥವಾ ಬ್ರಾಡ್ ಬ್ಯಾಂಡ್ ಸೇವೆಗಳು ಲಭ್ಯವಿಲ್ಲದ ಕಾರಣ ಕೆಲವೊಮ್ಮೆ ಸಕಾಲದಲ್ಲಿ ಇ–ಸೇವೆಗಳು ಜನಸಾಮಾನ್ಯರಿಗೆ ನೀಡುವಲ್ಲಿ ವಿಫಲವಾಗುತ್ತಿವೆ. ಆದ್ದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಇ–ಆಡಳಿತದ ಜ್ಞಾನವು ಹೆಚ್ಚಾಗಿ ದೊರೆಯುವುದಿಲ್ಲ ಎಂದು ಇ–ಆಡಳಿತ ವಿಷಯತಜ್ಞರ ಅಭಿಪ್ರಾಯವಾಗಿದೆ. ಅಂದರೆ ಸರ್ಕಾರಗಳು ಸಮರ್ಪಕವಾಗಿ ಇ–ಆಡಳಿತ ಬಳಸುವ ತರಬೇತಿ ಮಾಹಿತಿ ವಿನಿಮಯ ಕೌಶಲ್ಯಗಳು ನೀಡುವಲ್ಲಿ ವಿಫಲವಾಗಿವೆ. ಅದಕ್ಕಾಗಿ ಭಾರತ ಸರ್ಕಾರದ ಎರಡನೇ ಆಡಳಿತ ಸುಧಾರಣಾ ಆಯೋಗವು ಗ್ರಾಮೀಣ ಭಾಗದ ಹಳ್ಳಿಗಳಲ್ಲಿ ಇ–ಆಡಳಿತವನ್ನು ಯಶಸ್ವಿಗೊಳಿಸಲು ಅನೇಕ ಯೋಜನೆಗಳನ್ನು

ಹಮ್ಮಿಕೊಂಡಿದೆ. 2009ರಲ್ಲಿ ಎಂ.ವೀರಪ್ಪ ಮೊಯ್ಲಿ ಅವರ ಅಧ್ಯಕ್ಷತೆಯಲ್ಲಿ ಜಾರಿಗೆ ತಂದ ಆಡಳಿತ ಸುಧಾರಣಾ ಆಯೋಗ ಇ–ಆಡಳಿತಕ್ಕೆ ಹೆಚ್ಚಿನ ಒತ್ತನ್ನ ನೀಡಿದೆ.

ಗ್ರಾಮೀಣ ಪ್ರದೇಶದಲ್ಲಿ ಸಹ ಉನ್ನತ ತಂತ್ರಜ್ಞಾನದ ಜ್ಞಾನವನ್ನು ಪಡೆಯದೇ ಇರುವ ಅಧಿಕಾರಿ ವರ್ಗದವರು ಇರುತ್ತಾರೆ. ಈ ಅಧಿಕಾರಿ ವರ್ಗದವರು ಸುಧಾರಿತ ತಂತ್ರಜ್ಞಾನದ ಇ–ಆಡಳಿತದ ಬಳಕೆಯನ್ನು ಮಾಡುವಲ್ಲಿ ಹಿಂಜರಿಕೆಯನ್ನು ವ್ಯಕ್ತಪಡಿಸುತ್ತಾರೆ. ಇ–ಆಡಳಿತ ಬಳಕೆ ಮಾಡುವುದು ಕೆಲವೇ ಕೆಲವು ಬೆರಳೆಣಿಕೆಯಷ್ಟು ಅಧಿಕಾರಿವರ್ಗದರು. ಹೆಚ್ಚಿನ ಅಧಿಕಾರಿಗಳಿಗೆ ಇ–ಆಡಳಿತದ ಜ್ಞಾನ ಇರುವುದಿಲ್ಲ. ಏಕೆಂದರೆ ಇವರ ಶಿಕ್ಷಣದ ಮಟ್ಟ ಕಡಿಮೆಯಾಗಿರುತ್ತದೆಂದು ತಿಳಿದು ಬಂದಿರುತ್ತದೆ. ಉದಾ: ಗ್ರಾಮಪಂಚಾಯಿತಿಯಲ್ಲಿ ಕರ ವಸೂಲಿ ಮಾಡುವವರು, ನೀರಗಂಟಿ, ಜವಾನರು ಇನ್ನು ಮುಂತಾದವರು. ಇ–ಆಡಳಿತವನ್ನು ಅನುಷ್ಟಾನ ಗೊಳಿಸಲು ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳ ಅವುಗಳ ಬಳಕೆಯ ಬಗ್ಗೆ ಯಾವುದೇ ಪೂರ್ವ ತರಬೇತಿ ಮಾಹಿತಿಗಳನ್ನು ನೀಡಿರುವುದಿಲ್ಲ. ನೀಡಿದ್ದರೆ, ಅದು ಒಂದು ಹಂತದ ಅಧಿಕಾರಿಗಳಿಗೆ ಅಂದರೆ ಡೇಟಾ ಎಂಟ್ರಿ ಆಪರೇಟರ್‌ಗಳಿಗೆ ಹಾಗೂ ಉನ್ನತ ಮಟ್ಟದ ಅಧಿಕಾರಿಗಳಿಗೆ ಮಾತ್ರ ಇದರ ತರಬೇತಿಯನ್ನು ನೀಡಿರುತ್ತದೆ.

ಕಳೆದ ಒಂದು ದಶಕದಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆಯನ್ನು ಸರ್ಕಾರಿ ವ್ಯವಸ್ಥೆಯಲ್ಲಿ ಅನುಷ್ಠಾನ ಗೊಳಿಸುವ ಪ್ರಯತ್ನವನ್ನು ಅವಲೋಕಿಸಿದಾಗ ಈ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸಹಭಾಗಿಗಳೆಲ್ಲರ ಕಾರ್ಯ ಮಗ್ನತೆಯನ್ನು ಇ–ಆಡಳಿತವು ಯಾಚಿಸುತ್ತದೆ. ಬಹುತೇಕ ಸಮಯದಲ್ಲಿ ಇ–ಆಡಳಿತ ವ್ಯವಸ್ಥೆಯಲ್ಲಿ ತಾಂತ್ರಿಕತೆಗೆ ಮಹತ್ವ ನೀಡಿ ಸರ್ಕಾರಿ ನೌಕರರ ಅತ್ಯುನ್ನತ ಮಟ್ಟದ ಸಹಭಾಗಿತ್ವವನ್ನು ಕಡೆಗಣಿಸುತ್ತದೆ. ಇ–ಆಡಳಿತ ಪ್ರಕ್ರಿಯೆ ಯಲ್ಲಿ ಸರ್ಕಾರಿ ನೌಕರರ ಸಹಭಾಗಿತ್ವವು ಕೇವಲ ಅನುಷ್ಠಾನದಲ್ಲಿ ಮಾತ್ರ ಇರದೇ ಅವರುಗಳ ಪಾತ್ರವನ್ನು ಕಾರ್ಯ ಯೋಜನೆಯವರೆಗೂ ವಿಸ್ತರಿಸಬೇಕಾಗಿದೆ. ಇ–ಆಡಳಿತದ ಯಶಸ್ವಿ ಅನುಷ್ಠಾನದಲ್ಲಿ ಎರಡು ರೀತಿಯ ಸವಾಲುಗಳು ಎದುರಾಗುತ್ತವೆ. ಅವುಗಳನ್ನು ಮುಂದಿನಂತೆ ಗುರುತಿಸಲಾಗಿದೆ.

**ತಾಂತ್ರಿಕ ಸವಾಲುಗಳು**

ಇ–ಆಡಳಿತ ಪ್ರಕ್ರಿಯೆಯಲ್ಲಿ ವಿಫಲತೆಗಳನ್ನು ತಡೆದು ಯಶಸ್ಸನ್ನು ಸಾಧಿಸಬೇಕಾದರೆ ಭಾಗವಹಿಸುವ ಸಹಭಾಗಿದಾರರನ್ನು ಪ್ರೇರೇಪಣೆಗೊಳಿಸಿ ಬದಲಾವಣೆಯೊಂದಿಗೆ ನಿರ್ವಹಣಾ ಪ್ರಕ್ರಿಯೆಯನ್ನು ಸರಿದೂಗಿಸ ಬೇಕಾಗಿದೆ. ಇಡೀ ಪ್ರಕ್ರಿಯೆಯು ಅತ್ಯಂತ ಸುಲಭವಾಗಿ ನಿರೂಪಿಸಲ್ಪಟ್ಟು ಸ್ಥಳೀಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಅನುಷ್ಠಾನಗೊಳಿಸಬೇಕಿದೆ. ಈ ಕೆಳಕಂಡ ಅಂಶಗಳನ್ನು ಪರಿಗಣಿಸಿದರೆ ಇ–ಆಡಳಿತದಲ್ಲಿ ತಾಂತ್ರಿಕ ಸಮಸ್ಯೆಗಳನ್ನು ಯಶಸ್ವಿಯಾಗಿ ನಿಭಾಯಿಸಬಹುದು. 1. ಈಗಾಗಲೇ ಇ–ಆಡಳಿತವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಮಾದರಿಯನ್ನು ಅಭ್ಯಸಿಸಿ ಸೂಕ್ತ ಕ್ರಮ ಕೈಗೊಳ್ಳುವುದು. 2. ಮಾಹಿತಿ ತಂತ್ರಜ್ಞಾನದ ಸಾಮರ್ಥ್ಯ ಮತ್ತು ಕ್ರಿಯಾನುಷ್ಠಾನದಲ್ಲಿ ಅವುಗಳ ಬಳಕೆಯ ಕುರಿತು ಅಧ್ಯಯನ ಮಾಡುವುದಕ್ಕೆ ಸೂಕ್ತ ಸಮಯಾವಕಾಶ ನೀಡುವುದು. 3. ಎಲ್ಲಾ ಮಾಹಿತಿಯ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಒಂದು ಸಾಮಾನ್ಯ ಕೇಂದ್ರೀಯ ಮಾಹಿತಿ ಸಂಗ್ರಹವನ್ನು ರೂಪಿಸುವುದರೊಂದಿಗೆ ಎಲ್ಲಾ ಮಾದರಿ ಮಾಹಿತಿ ಲಭ್ಯವಾಗು ವಂತೆ ವ್ಯವಸ್ಥೆ ಮಾಡುವುದು. 4. ನಿರಂತರ ಮೌಲ್ಯಮಾಪನ (ವರ್ಷಕ್ಕೊಮ್ಮೆ) ಮಾಡುತ್ತಾ ಯೋಜನೆಯ ಅನುಷ್ಠಾನದಲ್ಲಿನ ಸಮಸ್ಯೆಗಳನ್ನು ಗುರುತಿಸಿ ಸೂಕ್ತ ಪರಿಹಾರ ತಂತ್ರಗಳನ್ನು ಕಂಡುಹಿಡಿಯುವುದು.

**ವ್ಯೂಹಾತ್ಮಕ ಸವಾಲುಗಳು**

ಯಾವುದೇ ಎರಡು ಸರ್ಕಾರಗಳು ಏಕರೂಪದಲ್ಲಿ ಕಾರ್ಯ ನಿರ್ವಹಿಸುವುದಿಲ್ಲ. ಪ್ರತಿಯೊಂದು ವ್ಯವಸ್ಥೆ ತನ್ನದೇ ಆದ ಕಾರ್ಯತಂತ್ರಗಳನ್ನು ರೂಪಿಸಿಕೊಂಡಿರುತ್ತದೆ. ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆ, ತನ್ನದೇ ಸಮಯ ನಿರ್ಬಂಧ, ಗುರಿ ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಕಾರ್ಯ ರೂಪದಲ್ಲಿ ಕೆಲ ಬದಲಾವಣೆಗಳನ್ನು ಮಾಡಿಕೊಳ್ಳುತ್ತದೆ. ಆದಾಗ್ಯೂ ಸರ್ಕಾರಗಳು ಇಂದು ಪ್ರಾದೇಶಿಕ ಮಟ್ಟದಿಂದ ಜಾಗತಿಕ ಮಟ್ಟದವರೆಗೂ ಅನೇಕ ಹಂತಗಳಲ್ಲಿ ಕಾರ್ಯ ನಿರ್ವಹಿಸುವ ಅವಶ್ಯಕತೆ ಇದ್ದು ಪರಸ್ಪರ ವಿರುದ್ಧವಾಗಿರದೇ ಸಹಕಾರದ ಮೂಲಕ ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕಿದೆ. 1. ಅಂತರ್ಜಾಲ ತಂತ್ರಜ್ಞಾನವು ಸರ್ಕಾರಗಳ ನಡುವೆ ಸಂಭವಿಸಬಹುದಾದ ವೈರುಧ್ಯಗಳನ್ನು ನಿಯಂತ್ರಿಸಿ ಉತ್ತಮ ಸಂಪರ್ಕ ಏರ್ಪಡಿಸಿ ಭೌಗೋಳಿಕ ಕಾರ್ಯವ್ಯಾಪ್ತಿ ಮತ್ತು ಕಾರ್ಯಕ್ರಮದ ವ್ಯಾಪ್ತಿ ಸೇವೆಗಳನ್ನು ಜನರಿಗೆ ಒದಗಿಸಬಹುದಾಗಿದೆ. 2. ಅಂತರ್ಜಾಲಾಧಾರಿತ ಸೇವೆಗಳನ್ನು ಒದಗಿಸುವ ಸಂದರ್ಭದಲ್ಲಿ ಉದ್ಯೋಗಿಗಳು ತೊಡಕಾಗಿ ಪರಿಣಮಿಸುತ್ತಾರೆ. 3. ಕೆಲ ನೌಕರರು ತಮ್ಮ ದೈನಂದಿನ ವ್ಯವಹಾರದಲ್ಲಿ ತಂತ್ರಜ್ಞಾನದ ಆಳವಡಿಕೆ ಬಗ್ಗೆ ಅಸಮಾಧಾನಗೊಂಡು ತಮಗೆ ಗೊತ್ತಿರುವ ಸಾಂಪ್ರದಾಯಿಕ ಮಾರ್ಗಗಳನ್ನು ಅನುಸರಿಸುತ್ತಾರೆ.

**ಕಾರ್ಯನಿರ್ವಹಣಾ ಸವಾಲುಗಳು**

ಸರ್ಕಾರ ಮತ್ತು ನಾಗರಿಕರ ನಡುವೆ ಸಂಪರ್ಕ ಮತ್ತು ಮಾಹಿತಿ ವಿನಿಮಯದ ಸ್ವರೂಪದಲ್ಲಿ ಬದಲಾವಣೆ ಇಲ್ಲವಾದ್ದರಿಂದ ಸಿಗುವ ಸೇವೆಗಳ ಏಕಗವಾಕ್ಷಿ ಮೂಲಕ ನಿರ್ವಹಿಸುವುದು. ಇ–ಆಡಳಿತಕ್ಕೆ ಸಂಬಂಧಿಸಿದಂತೆ ಮಾಹಿತಿ ಚೌಕಟ್ಟು ಮತ್ತು ಮಾರ್ಗದರ್ಶಕಗಳನ್ನು ನಿರ್ಧರಿಸುವುದು. ಅಂತರರಾಷ್ಟ್ರೀಯ ಮಟ್ಟದ ಇ–ಆಡಳಿತ ಯೋಜನೆಗಳು ಮತ್ತು ಗುಣಮಟ್ಟವನ್ನು ಅವಲೋಕಿಸುವುದು. ಸರ್ಕಾರದ ನಿಯೋಗಗಳ ನಡುವೆ ಮತ್ತು ನಿಯೋಗಗಳ ಒಳಗೆ ಸಹಕಾರ ತತ್ವವನ್ನು ಪುನರ್ ವಿನ್ಯಾಸಗೊಳಿಸುವುದು. ನವ ಸಂಘಟನಾತ್ಮಕ ವ್ಯವಸ್ಥೆಗೆ ಸರ್ಕಾರದ ನಿಯೋಗಗಳು ಮತ್ತು ಖಾಸಗಿ ನಿಯೋಗಗಳ ಸಹಭಾಗಿತ್ವವನ್ನು ರೂಪಿಸುವುದು.

**ಗ್ರಾಮೀಣ ಭಾಗಗಳಿಗೆ ಮಾಹಿತಿ ತಂತ್ರಜ್ಞಾನ ಆಡಳಿತದ ಸಂಭಾವ್ಯ ಅನ್ವಯಿಕೆ**

ಗ್ರಾಮೀಣ ಪ್ರದೇಶಗಳ ಇ–ಆಡಳಿತ ಮತ್ತು ಅದರ ಅನ್ವಯಿಕಗಳಿಗೆ ಪ್ರವೇಶ ಹೆಚ್ಚಿಸುವ ಹಾಗೂ ಗ್ರಾಮೀಣ ಪ್ರದೇಶಗಳ ಭವಿಷ್ಯದ ಅಭಿವೃದ್ಧಿಗೆ ಭರವಸೆ ನೀತಿಯಾಗಿ ಕಾಣಿಸಿಕೊಳ್ಳುತ್ತದೆ. ಈ ಮಾಹಿತಿ ಸಂಗ್ರಹ ಮತ್ತು ಪರಿಣಾಮಕಾರಿ ಭಾಗವಹಿಸುವಿಕೆ ತಳಮಟ್ಟದ ಪ್ರದೇಶಗಳಿಗೆ ಎರಡು ಅಂಶಗಳನ್ನು ಪೂರೈಸುತ್ತದೆ. ಇ–ಆಡಳಿತ ಮಾಹಿತಿ ತಂತ್ರಜ್ಞಾನ ಮತ್ತು ಅದರ ಅನ್ವಯಿಕೆ ಸಾಧನಗಳನ್ನು ಶಕ್ತಿಗೊಳಿಸಿ ಗ್ರಾಮೀಣ ಅಭಿವೃದ್ಧಿ ದೃಷ್ಟಿಕೋನಗಳನ್ನು ಬೆಂಬಲಿಸುವುದು ಒಂದು ಅಂಶವಾದರೆ ಎರಡನೆಯ ಅಂಶವು ಹೊಸದಾಗಿ ವಿಕಸಿತಗೊಳ್ಳುತ್ತಿರುವ ಗ್ರಾಮೀಣಾಭಿವೃದ್ಧಿ ಮಾದರಿಯನ್ನು ವಿವರಿಸುತ್ತದೆ. ಗ್ರಾಮೀಣ ಪ್ರದೇಶಗಳು ನೈಸರ್ಗಿಕ ಮತ್ತು ಸಾಂಸ್ಕೃತಿಕ ಸಂಪನ್ಮೂಲಗಳಿಂದ ಸಮೃದ್ಧವಾಗಿದ್ದರೂ ಈ ಸಂಪನ್ಮೂಲಗಳನ್ನು ನಿರ್ಬಂಧಿಸುವ ಜ್ಞಾನ, ಸಾಮರ್ಥ್ಯ ಕೊರತೆ ಇರುವ ಪ್ರದೇಶಗಳು ಗಣನೀಯವಾಗಿವೆ. ಜ್ಞಾನ ಮತ್ತು ಮಾಹಿತಿ ಸೊಸೈಟಿ ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ರೂಪಗಳನ್ನು ತೆಗೆದುಕೊಳ್ಳುತ್ತದೆ. ಸುಸ್ಥಿರ ಗ್ರಾಮೀಣಾಭಿವೃದ್ಧಿ ಇಲ್ಲದ ಸಮಕಾಲೀನ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಲ್ಲಿನ ಬದಲಾವಣೆಗಳು ಬಹಿರಂಗ ಪಡಿಸುತ್ತವೆ.

ಗ್ರಾಮೀಣಾಭಿವೃದ್ಧಿ ನೀತಿಯನ್ನು ಸಮರ್ಥವಾಗಿ ಅನುಷ್ಠಾನಗೊಳ್ಳಲು ಹಲವಾರು ಸವಾಲುಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವ ಅಗತ್ಯವಿದೆ.

- ಸಂಪನ್ಮೂಲಗಳು, ಇತಿಹಾಸ ಮತ್ತು ಮೌಲ್ಯಗಳ ಆಧಾರದ ಮೇಲೆ ಗ್ರಾಮೀಣ ಪ್ರದೇಶಗಳು

ರೂಪುಗೊಂಡಿರುತ್ತದೆ. ಈ ಸ್ಥಿತಿಯನ್ನು ಸುಧಾರಣೆ ಮಾಡುಲು ವಸ್ತುನಿಷ್ಠ ವಿಧಾನವನ್ನು ಗ್ರಾಮೀಣಾಭಿವೃದ್ಧಿ ಬಯಸುತ್ತದೆ.

- ಕೃಷಿ ಆಧಾರಿತ ಗ್ರಾಮೀಣಾಭಿವೃದ್ಧಿ ಇ–ಆಡಳಿತ ವಿಧಾನದಿಂದ ಅಭಿವೃದ್ಧಿ ದೃಷ್ಟಿಕೋನ ಬದಲಾಗಿದೆ. ಗ್ರಾಮೀಣ ಅಭಿವೃದ್ಧಿಯು ಆ ಭಾಗದಲ್ಲಿ ಲಭ್ಯವಿರುವ ಸುಸ್ಥಿರ ಅಂಶಗಳನ್ನು ಸುಧಾರಿಸಲು ಬಯಸುತ್ತದೆ. ಉದಾ: ಗ್ರಾಮೀಣ ಪ್ರವಾಸೋದ್ಯಮ, ಕೃಷಿಯೇತರ ಗ್ರಾಮೀಣ ಆರ್ಥಿಕತೆ ಇತ್ಯಾದಿ ಅಂಶಗಳನ್ನು ಗ್ರಾಮೀಣಾಭಿವೃದ್ಧಿ ಯಾಚಿಸುತ್ತದೆ.
- ಗ್ರಾಮೀಣ ಭಾಗದಲ್ಲಿ ಸರಿಯಾದ ಮಾಹಿತಿ ವಿನಿಮಯಕ್ಕೆ ಇ–ತಂತ್ರಾಂಶಗಳನ್ನು ಮೂಲ ಸೌಕರ್ಯಗಳ ಮೂಲಕ ಭಾಗಿದಾರರಾದ ನಾಗರಿಕರು, ಅಧಿಕಾರಿಗಳು, ಆಡಳಿತ ಸಂಸ್ಥೆಗಳು ಇತ್ಯಾದಿಗಳನ್ನು ಸಜ್ಜುಗೊಳಿಸಬೇಕಿದೆ.
- ಗ್ರಾಮೀಣ ಪ್ರದೇಶಗಳಲ್ಲಿ ಮಾಹಿತಿ ಮತ್ತು ಜ್ಞಾನದ ಮೂಲಗಳಿಗೆ ನಾಗರಿಕರ ಪ್ರವೇಶ ಅವಶ್ಯಕವಾಗಿದೆ.

ಇದರ ಹೊರತಾಗಿ ಗ್ರಾಮೀಣ ಪ್ರದೇಶಗಳಿಗೆ ಸರ್ಕಾರಗಳು ನೀತಿ ರಚಿಸುವ ಸಂದರ್ಭದಲ್ಲಿ ನೈಸರ್ಗಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಮತ್ತು ಇವುಗಳ ಬಳಕೆ ಸ್ಥಳೀಯ ಹಂತಗಳಲ್ಲಿ ಸರಿದಾರಿಯಲ್ಲಿ ಸಾಗಬೇಕು. ಜೊತೆಗೆ ಕೃಷಿ ನೀತಿಯಲ್ಲಿ ಅತಿಯಾದ ರಿಯಾಯಿತಿಗಳನ್ನು ಒದಗಿಸುವ ಮೂಲಕ ರಾಷ್ಟ್ರಗಳು ಹೆಚ್ಚಿನ ಆರ್ಥಿಕ ಹೊರೆ ಅನುಭವಿಸುವುದು ಮತ್ತು ವಿಕೇಂದ್ರೀಕರಣ ಪ್ರವೃತ್ತಿಯಿಂದಾಗಿ ಸ್ಥಳೀಯ ಹಂತದಲ್ಲಿ ಪ್ರಾದೇಶಿಕತೆ ಮೌಲ್ಯಗಳು ಬದಲಾವಣೆ ಸನ್ನಿವೇಶಗಳನ್ನು ಬಹುಬೇಗ ಒಪ್ಪಿಕೊಳ್ಳದಿದ್ದರೆ ಸಮಸ್ಯೆಗಳು ಗ್ರಾಮೀಣ ಭಾಗದಲ್ಲಿ ಇ–ಆಡಳಿತಕ್ಕೆ ಅಡೆತಡೆಗಳಾಗಿ ಪರಿಣಮಿಸಿವೆ.

**ಇ–ಆಡಳಿತದ ಸಮಗ್ರ ಅನುಷ್ಠಾನದಿಂದ ಆಗುವ ಆಡಳಿತತ್ಮಾಕ ಬದಲಾವಣೆಗಳು**

ಬದಲಾವಣೆಯ ಇ–ಆಡಳಿತವು ಸರ್ಕಾರದೊಂದಿಗೆ ಸಂವಹನ ನಡೆಸಲು ಕಾಗದ ಆಧಾರಿತದಿಂದ ವೆಬ್ ಆಧಾರಿತ ವ್ಯವಸ್ಥೆಗೆ ಚಲಿಸುವಲ್ಲಿ ಹೆಚ್ಚಿನ ಹಿಂಜರಿಕೆ ಸಂಭವಿಸುತ್ತದೆ. ವಹಿವಾಟುಗಳನ್ನು ಹೇಗೆ ಪ್ರಕ್ರಿಯೆಗೊಳಿಸಬೇಕು ಎಂಬುದರ ಕುರಿತು ನಾಗರಿಕರು, ಉದ್ಯೋಗಿಗಳು, ವ್ಯವಹಾರಗಾರರು ಎಲ್ಲರೂ ಪಕ್ಷಪಾತ ಹೊಂದುವ ಸಾಧ್ಯತೆ ಇರುತ್ತದೆ. ಈ ಸಂದರ್ಭಕ್ಕೆ ಹೊಸ ವ್ಯವಸ್ಥೆಯ ಮೌಲ್ಯದ ಬಗೆಗಿನ ಶಿಕ್ಷಣವು ಅಸ್ತಿತ್ವದಲ್ಲಿರುವ ಕೆಲ ಪ್ರತಿರೋಧವನ್ನು ಕಡಿಮೆ ಮಾಡುತ್ತದೆ.

**ಸಾಮಾನ್ಯ ಜನರಲ್ಲಿ ಆಗುವ ಬದಲಾವಣೆ**

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಆಡಳಿತದಿಂದ ಭಾರತದ ಗ್ರಾಮೀಣ ಪ್ರದೇಶದಲ್ಲಿ ಅನೇಕ ಬದಲಾವಣೆಗಳು ಕಂಡುಬರುತ್ತವೆ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯಲ್ಲಿ ಅನೇಕ ಇ–ಆಡಳಿತದ ಉಪಕರಣಗಳನ್ನು ಜಾರಿತರಲಾಗಿದೆ. ಅವುಗಳಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ, ಪಂಚತಂತ್ರ, ಬಾಪೂಜಿ ಸೇವ ಕೇಂದ್ರ, ಅಟಲ್ ಜೀ ಕೇಂದ್ರಗಳನ್ನು ಅನುಷ್ಠಾನಕ್ಕೆ ತರುವುದರ ಮೂಲಕ ನಾಗರಿಕರಿಗೆ ಸರ್ಕಾರಿ ಸೇವೆಗಳು ಸುಲಭವಾಗಿ ದೊರೆಯುವಂತಾಗಿವೆ. ಸರ್ಕಾರದ ಯಾವುದೂ ಕಚೇರಿಯ ಮುಂದೆ ಸರತಿ ಸಾಲಿನಲ್ಲಿ ನಿಂತು ಗಂಟೆಗಟ್ಟಲೆ ದಿನಗಟ್ಟಲೆ ಕಾಯುವ ಪರಿಸ್ಥಿತಿಯನ್ನು ಕಡಿಮೆ ಮಾಡಿದೆ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಇ–ಆಡಳಿತದ ಮೂಲಕ ಜನಸಾಮಾನ್ಯರಿಗೆ ನೀರು ಮತ್ತು ನೈರ್ಮಲ್ಯ ಸೇವೆಗಳು ಸುಲಭವಾಗಿ ಇ–ಉಪಕ್ರಮಗಳ ಸಹಾಯದಿಂದ ನಿಗದಿತ ಸಮಯದಲ್ಲಿ ಒದಗಿಸುತ್ತವೆ. ಗ್ರಾಮೀಣ ಸ್ಥಳೀಯ ಸಂಸ್ಥೆಗಳ

ತಳಮಟ್ಟದ ವ್ಯವಸ್ಥೆಯಾದ ಗ್ರಾಮ ಪಂಚಾಯತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯು ಗ್ರಾಮೀಣ ಜನರಿಗೆ ಆನ್‌ಲೈನ್‌ನಲ್ಲಿ ಜಾಬ್ ಕಾರ್ಡ ಮತ್ತು ಕೂಲಿಹಣ ಪಡೆಯುವಂತೆ ಮಾಡಿದೆ. ಆದ್ದರಿಂದ ಗ್ರಾಮ ಪಂಚಾಯತಿಯಲ್ಲಿ ಕಳಪೆ ಗುಣಮಟ್ಟದ ಕಾಮಗಾರಿ ಮತ್ತು ಭ್ರಷ್ಟಾಚಾರವನ್ನು ನಿಯಂತ್ರಿಸುತ್ತದೆ. ಜನರಿಗೆ ಬಯೋಮೆಟ್ರಿಕ್ ಆಧಾರಿತ ಉದ್ಯೋಗ ಮತ್ತು ವೇತನ ನೀಡುವುದರಿಂದ ಯೋಜನೆಗಳ ದುರ್ಬಳಕೆಗೆ ಕಡಿವಾಣ ಹಾಕಿದಂತಾಗುತ್ತದೆ.

ಬಾಪೂಜಿ ಸೇವಾ ಕೇಂದ್ರಗಳು ಆರ್‌ಡಿಪಿಆರ್ ಇಲಾಖೆಯ ಅಡಿಯಲ್ಲಿ ಕರ್ನಾಟಕ ಸರ್ಕಾರವು ಜುಲೈ 1, 2016 ರಂದು ಪ್ರಾರಂಭವಾದ ವಿಶಿಷ್ಟ ಉಪಕ್ರಮವಾಗಿದೆ. ಗ್ರಾಮೀಣ ಜನತೆ ತಮ್ಮ ಸಾಮಾಜಿಕ ಶೈಕ್ಷಣಿಕ ವಾಣಿಜ್ಯ ಹಾಗೂ ಕೃಷಿ ಚಟುವಟಿಕೆಗಳಿಗಾಗಿ ಅವಶ್ಯಕವಿರುವ ವಿವಿಧ ಇಲಾಖೆಗಳ ದಾಖಲಾತಿಗಳನ್ನು ತ್ವರಿತಗತಿಯಲ್ಲಿ ಪಡೆದುಕೊಳ್ಳುವ ಸಲುವಾಗಿ ಕಂದಾಯ ಇಲಾಖೆಯೊಂದಿಗೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ಇ–ಉಪಕ್ರಮದ ಮೂಲಕ ಜನರಿಗೆ ಉತ್ತಮ ಆಡಳಿತ ದೊರೆಯುವಂತೆ ಮಾಡಿದೆ. ಗಾಂಧಿ ಸಾಕ್ಷಿ ಕಾಯಕ ಆನ್‌ಲೈನ್ ಉಪಕ್ರಮದ ಸೇವೆಗಳು ಗ್ರಾಮೀಣ ಜನರಿಗೆ ಉತ್ತಮ ಆಡಳಿತ ಒದಗಿಸುತ್ತದೆ. ಗ್ರಾಮೀಣ ಶಿಕ್ಷಣ ಕ್ಷೇತ್ರದಲ್ಲಿ ಇ–ಆಡಳಿತ ಅನುಷ್ಠಾನದಿಂದ ನಿಖರ, ವೇಗ ಮತ್ತು ಪಾರದರ್ಶಕತೆಯೊಂದಿಗೆ ಉತ್ತಮ ಆಡಳಿತವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಇದಲ್ಲದೆ ಇ–ಆಡಳಿತ ಶಿಕ್ಷಣ ಇಲಾಖೆಯಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. ವಿದ್ಯಾರ್ಥಿಗಳ ದಾಖಲಾತಿಯಿಂದ ಪ್ರಾರಂಭವಾಗಿ ಪರೀಕ್ಷೆಯ ಫಲಿತಾಂಶದ ವರೆಗೂ ಇ–ಆಡಳಿತದ ಮೂಲಕ ನಡೆಯುತ್ತದೆ. ಹಾಜರಾತಿ, ಇಲಾಖೆ ಆದೇಶಗಳು, ನಡಾವಳಿಗಳು ಇನ್ನು ಮುಂತಾದವು ಆಡಳಿತದ ವ್ಯಾಪ್ತಿಯಲ್ಲಿ ತರಲಾಗಿದೆ.

ಗ್ರಾಮೀಣ ಪ್ರದೇಶ ಕೃಷಿ ಇಲಾಖೆಯ ಅನೇಕ ಯೋಜನೆಗಳು ಮತ್ತು ಮಾಹಿತಿಗಳು ಇ–ಆಡಳಿತದ ವ್ಯಾಪ್ತಿಗೆ ತರಲಾಗಿದೆ. ರೈತರಿಗೆ ಬೆಳೆ ವಿವರ ಬೆಳೆ ವಿಮೆ ಬೆಳೆ ಬೆಲೆ ಮುಂತಾದ ಮಾಹಿತಿ ಆನ್‌ಲೈನ್ ನಲ್ಲಿ ದೊರೆಯುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಿಡುಗಡೆ ಮಾಡಿದ ಅನುದಾನ ಸಹಾಯಧನಗಳು ಇ–ಆಡಳಿತಕ್ಕೆ ಒಳಪಡಿಸಲಾಗಿದೆ. ರೈತ ಸಂಪರ್ಕ ಅಧಿಕಾರಿಗಳು ರೈತರ ಬೆಳೆಯನ್ನು ಜಿಪಿಎಸ್ ಆಧಾರಿತ ಸರ್ವೆ ಮಾಡಿ ಸರ್ಕಾರಕ್ಕೆ ಮಾಹಿತಿ ನೀಡುತ್ತಾರೆ. ಇದರಿಂದ ರೈತರಿಗೆ ತ್ವರಿತವಾಗಿ ಸರ್ಕಾರಿ ಸೌಲಭ್ಯಗಳು ದೊರೆಯುತ್ತವೆ. ಅವುಗಳಲ್ಲಿ ಪ್ರಧಾನ ಮಂತ್ರಿ ಕಿಸಾನ್ ಸನ್ಮಾನ್ಯನಿಧಿಯು ಆನ್‌ಲೈನ್‌ನಲ್ಲಿ ಹಣ ಸಂದಾಯವಾಗುತ್ತದೆ. ಫಸಲ್ ಭೀಮಾ ವಿಮೆ ಯೋಜನೆ ಆನ್‌ಲೈನ್‌ನಲ್ಲಿ ಬೆಳೆನಷ್ಟ ಸರ್ವೆ ಮಾಡಿ ಬೆಳೆವಿಮೆ ಹಣ ಬಿಡುಗಡೆ ಮಾಡುತ್ತಾರೆ. ಈ ಹಣವನ್ನು ರೈತರು ಬ್ಯಾಂಕ್ ಖಾತೆಯಲ್ಲಿ ಅಥವಾ ಬಯೋಮೆಟ್ರಿಕ್ ಆಧಾರದಲ್ಲಿ ಪಡೆದುಕೊಳ್ಳುತ್ತಾರೆ.

**ಆದಾಯದಲ್ಲಾಗುವ ಬದಲಾವಣೆ**

ಗ್ರಾಮೀಣ ಪ್ರದೇಶದ ಸಾರ್ವಜನಿಕ ಆಡಳಿತದಲ್ಲಿ ಇ–ಆಡಳಿತದ ಅನುಷ್ಠಾನದಿಂದ ಜನರ ಆದಾಯದಲ್ಲಿ ಬದಲಾವಣೆ ಕಂಡುಬರುತ್ತದೆ. ಇಲಾಖೆಗಳ ನಾಗರಿಕ ಸೇವೆಗಳನ್ನು ಇ–ಆಡಳಿತಕ್ಕೆ ಒಳಪಡಿಸಿದಾಗ ಜನರಿಗೆ ಸಮಯ ಮತ್ತು ವೆಚ್ಚ ಕಡಿಮೆಯಾಗುತ್ತದೆ. ಹಾಗೂ ಭ್ರಷ್ಟಾಚಾರ ಕಡಿಮೆಯಾಗಿ ಜನರ ಹಣ ಉಳಿತಾಯವಾಗಿ ಆದಾಯದಲ್ಲಿ ಹೆಚ್ಚಳ ಉಂಟಾಗುತ್ತದೆ. ಜನರಿಗೆ ಉದ್ಯೋಗಾವಕಾಶ ದೊರೆಯುವುದರಿಂದ ಅವರ ದುಡಿಯುವ ಸಾಮರ್ಥ್ಯ ಹೆಚ್ಚಾಗಿ ಆದಾಯದಲ್ಲಿ ಹೆಚ್ಚಳ ಉಂಟಾಗುತ್ತದೆ. ಇನ್ನು ಗ್ರಾಮೀಣ ಆಡಳಿತ ಇಲಾಖೆಗಳ ತೆರಿಗೆ ಪ್ರಮಾಣದಲ್ಲಿ ಹೆಚ್ಚಾಗುತ್ತದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಭೂಮಿ, ಕಟ್ಟಡಗಳು, ಮನರಂಜನೆ ತೆರಿಗೆಗಳು, ನೀರಿನ ತೆರಿಗೆ, ಅಂಗಡಿ ಮಳಿಗೆಗಳ ತೆರಿಗೆ, ಪ್ರವಾಸಿ ತಾಣಗಳ

ವಾಹನ ನಿಲುಗಡೆ ತೆರಿಗೆ, ವ್ಯಾಪಾರಿ ಅನುಮತಿ ಶುಲ್ಕ ಇನ್ನು ಮುಂತಾದವು ಇ–ಆಡಳಿತಕ್ಕೆ ಒಳಪಡುತ್ತವೆ.

ಗ್ರಾಮ ಪಂಚಾಯತ್‌ಗಳ ಕಟ್ಟಡಗಳು ಮತ್ತು ಭೂಮಿಯ ಮೇಲೆ ತೆರಿಗೆ, ನೀರಿನ ದರ, ಮನರಂಜನೆಯ ಮೇಲೆ ತೆರಿಗೆ, ವಾಹನಗಳು, ಜಾಹೀರಾತು ಮತ್ತು ಸಂಗ್ರಹಣೆ ಮತ್ತು ಮಾರುಕಟ್ಟೆ ಶುಲ್ಕವನ್ನು ಸಂಗ್ರಹಿಸುವುದು, ಬಸ್ ನಿಲ್ದಾಣಗಳಲ್ಲಿ ಶುಲ್ಕ ಮತ್ತು ಜಾನುವಾರುಗಳನ್ನು ಮೇಯಿಸುವುದು ಇತ್ಯಾದಿಗಳ ಮೇಲೆ ತೆರಿಗೆಯನ್ನು ವಿಧಿಸುವ ಅಧಿಕಾರವನ್ನು ಹೊಂದಿ ಇವುಗಳು ಸರಿಯಾಗಿ ಇ–ಆಡಳಿತದ ನಿರ್ವಹಣೆಯಿಂದ ಗ್ರಾಮೀಣ ಆದಾಯ ಹೆಚ್ಚಾಗುತ್ತದೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳೆರಡೂ ಇತರರು ಬಳಸುವ ತಮ್ಮ ಆಸ್ತಿಯ ಮೇಲೆ ಶುಲ್ಕ ವಿಧಿಸಲು ಅನುಮತಿ ನೀಡಲಾಗಿರುತ್ತದೆ. ಅದರೆ ತೆರಿಗೆಗಳನ್ನು ವಿಧಿಸಲು ಅವರಿಗೆ ಅಧಿಕಾರವಿಲ್ಲ. ಇದಲ್ಲದೆ, ಗ್ರಾಮ ಪಂಚಾಯತ್‌ಗಳು ಮತ್ತು ತಾಲೂಕು ಪಂಚಾಯತ್‌ಗಳು ಭೂಮಿ ಆದಾಯದ ಮೇಲೆ ಜನರಿಂದ ಆದಾಯವನ್ನು ಪಡೆದುಕೊಳ್ಳುತ್ತವೆ. ಸ್ಟಾಂಪ್ ಸುಂಕದ ಮೇಲೆ ರಾಜ್ಯ ಸರಕಾರವು ಸರ್‌ಚಾರ್ಜನ್ನು ವಿಧಿಸಲ್ಪಡುತ್ತದೆ. ಇವುಗಳನ್ನು ಹೊರತುಪಡಿಸಿ, ಪಂಚಾಯತ್‌ಗಳು ಸರ್ಕಾರದಿಂದ ಒದಗಿಸಿದ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಿ ಆದಾಯ ಸಂಗ್ರಹವಾಗುತ್ತದೆ. ಗ್ರಾಮೀಣ ಜನರಿಗೆ ಅನುದಾನಗಳು ಇ–ಆಡಳಿತದ ಮೂಲಕ ಬಿಡುಗಡೆಯಾಗುವುದರಿಂದ ಫಲಾನುಭವಿಗಳಿಗೆ ನೇರವಾಗಿ ಹಣ ದೊರೆಯುವುದರಿಂದ ಜನರ ಆದಾಯದಲ್ಲಿ ಬದಲಾವಣೆಯಾಗುತ್ತದೆ. ಇ–ಆಡಳಿತದ ಬಳಕೆ ಆರ್ಥಿಕ ಚಟುವಟಿಗಳು ಹೆಚ್ಚಾಗಿ ಆದಾಯದಲ್ಲಿ ಬೆಳವಣೆಯಾಗುತ್ತದೆ.

**ಆಡಳಿತ ವರ್ಗದಲ್ಲಿ ಬದಲಾವಣೆ**

ಗ್ರಾಮಪಂಚಾಯತಿಯಲ್ಲಿ ಪಂಚತಂತ್ರ ಸಾಫ್ಟ್‌ವೇರ್‌ನಲ್ಲಿ ಗ್ರಾಮಪಂಚಾಯಿತಿಗಳ ಸಿಬ್ಬಂದಿಗಳ ಹಾಜರಾತಿ ವೇತನ ಹಣಕಾಸಿನ ಆಯೋಗ ಮತ್ತು ಯೋಜನೆಗಳ ಕಾಮಗಾರಿಯ ವಿವರ, ಸಭೆಯ ನಡವಳಿಗಳು ನಮೂದಿಸಿ ಆಡಳಿತ ವೇಗ ವರ್ಧನೆಯನ್ನು ಹೆಚ್ಚಿಸಿಕೊಂಡಿವೆ. ಆಡಳಿತ ವರ್ಗದವರಿಗೆ ಇ–ಆಡಳಿತದ ಅನುಷ್ಠಾನದಿಂದ ಇ–ಹಾಜರಾತಿಯು ಅಧಿಕಾರಿಗಳು ಕಚೇರಿಗೆ ವಿಳಂಬವಾಗಿ ಬರುವುದು, ಇಲ್ಲವೇ ಮರುದಿನ ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕುವುದಕ್ಕೆ ಅಂಕುಶ ಹಾಕಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಛೇರಿಗಳಲ್ಲಿ ಬಯೊಮೆಟ್ರಿಕ್, ಇ–ಹಾಜರಾತಿ ಪದ್ಧತಿಯನ್ನು ಜಾರಿಗೆ ತಂದಿದೆ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ರಕ್ಷಣಾ ಇಲಾಖೆಗಳಲ್ಲಿನ ಸಿಬ್ಬಂದಿಗಳಿಗೆ ಇ–ಆಡಳಿತವು ಹೆಚ್ಚು ದಕ್ಷತೆಯನ್ನು ಬೆಳೆಸುತ್ತದೆ. ಸಿಬ್ಬಂದಿಗಳಿಗೆ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ತರಲು ಇ–ಆಡಳಿತದ ಪರಿಕಲ್ಪನೆಯು ಉತ್ತಮ ಕಾರ್ಯನಿರ್ವಹಿಸುವಂತೆ ಮಾಡುತ್ತದೆ. ಆಡಳಿತ ಸೇವಾ ವರ್ಗದವರಿಗೆ ಯೋಜನೆಗಳ ಮಾಹಿತಿ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ನೌಕರಶಾಹಿ ವರ್ಗಕ್ಕೆ ಕೆಲಸದ ಧಕ್ಷತೆಯನ್ನು ಹೆಚ್ಚುತ್ತದೆ. ಆಡಳಿತ ಸೇವಾ ವರ್ಗದ ಉನ್ನತ ಮಟ್ಟದ ಅಧಿಕಾರಿಗಳು ಯೋಜನೆಗಳ ಕೆಲಸದ ಮಾಹಿತಿ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ಸಿಬ್ಬಂದಿಗಳಿಗೆ ಆಡಳಿತದಲ್ಲಿ ಪಾರದರ್ಶಕತೆಯ ಜೊತೆಗೆ ಸಮಯದ ಉಳಿತಾಯ ಮತ್ತು ಹೆಚ್ಚಿನ ಕಾರ್ಯಭಾರವನ್ನು ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಲು ಸಹಾಯ ಮಾಡುತ್ತದೆ.

**ಸಂಪನ್ಮೂಲಗಳ ಕ್ರೂಢಿಕರಣ ಮತ್ತು ಬಳಕೆಯಲ್ಲಿ ಬದಲಾವಣೆ**

ಗ್ರಾಮೀಣ ಪ್ರದೇಶಗಳಲ್ಲಿ ಇ–ಆಡಳಿತದ ಅನುಷ್ಠಾನದಿಂದ ಸಂಪನ್ಮೂಲಗಳ ಕ್ರೂಢಿಕರಣ ಮತ್ತು ಬಳಕೆಯಲ್ಲಿ ಬದಲಾವಣೆ ಕಂಡುಬರುತ್ತದೆ. ಇ–ಆಡಳಿತದ ಬಳಕೆಯಿಂದ ಗ್ರಾಮೀಣ ಪ್ರದೇಶದಲ್ಲಿ ಇರುವು ಮೂಲಸೌಕರ್ಯಗಳಾದ ನೈರ್ಮಲ್ಯ, ವಸತಿ,

ಪೈಪ್‌ಲೈನ್ ಕುಡಿಯುವ ನೀರು, ವಿದ್ಯುತ್, ಉತ್ತಮ ಶಿಕ್ಷಣ, ಆರೋಗ್ಯ ಸೌಲಭ್ಯಗಳು, ಕೌಶಲ್ಯಗಳು ಹಾಗೂ ಉದ್ಯೋಗಗಳು ಉತ್ತಮ ಜೀವನಮಟ್ಟವನ್ನು ನಡೆಸಲು ಇ–ಆಡಳಿತ ವ್ಯಸ್ಥೆಯು ಸಹಕಾರಿಯಾಗಿರುತ್ತದೆ.

ಇ–ಆಡಳಿತವು ಗ್ರಾಮೀಣ ಆರೋಗ್ಯ ಕ್ಷೇತ್ರದಲ್ಲಿ ಸಾರ್ವಜನಿಕರಿಗೆ ಆರೋಗ್ಯ ಸೇವೆಗಳನ್ನು ದಕ್ಷ ಮತ್ತು ಪರಿಣಾಮಕಾರಿ ಪಾರದರ್ಶಕ ತತ್ವದೊಂದಿಗೆ ಕಾರ್ಯನಿರ್ವಹಸುತ್ತದೆ. ಸಮಯ ಮತ್ತು ವೆಚ್ಚದ ಉಳಿತಾಯದ ಲಾಭದೊಂದಿಗೆ ಗ್ರಾಮೀಣ ಜನರಿಗೆ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ಉತ್ತಮ ಆಡಳಿತ ನೀಡುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇ–ಉಪಕರಣಗಳನ್ನು ಬಳಸಿಕೊಂಡು ಉತ್ತಮ ಸೇವೆ ಒದಗಿಸುತ್ತದೆ. ರಾಷ್ಟ್ರೀಯ ಆರೋಗ್ಯ ಮಷೀನ್ ಸಾರ್ವಜನಿಕರ ಆರೋಗ್ಯ ಸುಧಾರಣೆಯನ್ನು ತರುವ ನಿಟ್ಟಿನಲ್ಲಿ ಕಾಲ ಕಾಲಕ್ಕೆ ಅನೇಕ ಮಾರ್ಗಸೂಚಿ ಆದೇಶಗಳನ್ನು ಹೊರಡಿಸುತ್ತದೆ

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಗ್ರಾಮೀಣ ಪ್ರದೇಶದಲ್ಲಿ ಜನರು ಇ–ಆಡಳಿತವನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬಳಸುತ್ತಿದ್ದಾರೆ ಎಂದು ಕಂಡುಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಇ–ಆಡಳಿತವು ಹೆಚ್ಚಿನ ಪ್ರಮಾಣದಲ್ಲಿ ಬದಲಾವಣೆಯನ್ನು ತಂದಿದೆ ಎಂದರೆ ತಪ್ಪಾಗುವುದಿಲ್ಲ.

**ಉಪಸಂಹಾರ**

ಆಡಳಿತದ ಬಗ್ಗೆ ಸಮಗ್ರವಾಗಿ ಅವಲೋಕಿಸಿದಾಗ 1990ರ ದಶಕದ ಅಂತ್ಯದಲ್ಲಿ ವಿದ್ಯುನ್ಮಾನ ಆಡಳಿತ ಪ್ರಾರಂಭಗೊಂಡು ಇಂದು ರಾಜ್ಯದ ಬಹುತೇಕ ಇಲಾಖೆಗಳನ್ನು ಹಂತ ಹಂತವಾಗಿ ಇ–ಆಡಳಿತದ ವ್ಯಾಪ್ತಿಗೆ ಸೇರ್ಪಡಿಸಲಾಗಿದೆ. ಆದರೆ ದೇಶ, ರಾಜ್ಯ ಮಟ್ಟದ ಯಾವುದೇ ಯೋಜನೆ ಮತ್ತು ಆಡಳಿತಾತ್ಮಕ ಚಿಂತನೆ ಗ್ರಾಮೀಣ ಭಾಗದಲ್ಲಿ ಯಶಸ್ವಿಯಾದರೆ ಮಾತ್ರ ಅಭಿವೃದ್ಧಿ ಸಾಧ್ಯ ಎನ್ನುವ ಸಂದರ್ಭಕ್ಕೆ ಗ್ರಾಮೀಣ ಸ್ಥಳೀಯ ಸರ್ಕಾರಗಳ ವ್ಯಾಪ್ತಿಯಲ್ಲೂ ಇ–ಆಡಳಿತದ ಬೇರುಗಳು ಗಟ್ಟಿಗೊಳ್ಳುತ್ತಿವೆ. ಪ್ರಸ್ತುತ ಕರ್ನಾಟಕ ಸರ್ಕಾರ ಈ ಉದ್ದೇಶ ಸಾಧನೆಗಾಗಿ ಗ್ರಾಮೀಣ ಸ್ಥಳೀಯ ಸರ್ಕಾರಗಳ ಮೂರು (03) ಹಂತದಲ್ಲೂ ಇ–ಆಡಳಿತಕ್ಕೆ ಚಾಲನೆ ನೀಡಿ ಗ್ರಾಮೀಣ ಜನತೆಗೆ ಸ್ಥಳೀಯವಾಗಿಯೇ ಆನ್‌ಲೈನ್‌ನಲ್ಲಿ ಸೇವೆ ಒದಗಿಸಲು ಪ್ರಯತ್ನಿಸುತ್ತಿದೆ. ಆದರೆ ಇ–ಆಡಳಿತದ ಪೂರ್ಣ ಯಶಸ್ವಿಗೆ ಜನರ ಭಾಗವಹಿಸುವಿಕೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಅನಕ್ಷರತೆ ಮತ್ತು ಅಗತ್ಯ ಕಂಪ್ಯೂಟರ್ ಜ್ಞಾನ ಜನ ಹೊಂದದೆ ಇರುವುದು ಇದಲ್ಲದೇ ಸಿಬ್ಬಂದಿಯ ಸಹ ಬದಲಾದ ಸನ್ನಿವೇಶಗಳಿಗೆ ಹೊಂದಿಕೊಳ್ಳದಿರುವುದು, ಸ್ಥಳೀಯ ಆನ್‌ಲೈನ್ ಕೇಂದ್ರಗಳಲ್ಲಿ ಅಗತ್ಯ ಸೌಲಭ್ಯಗಳ ಕೊರತೆ ಮೊದಲಾದ ತೊಡಕುಗಳಿಂದಾಗಿ ಗ್ರಾಮೀಣ ಭಾಗದಲ್ಲಿ ಇ–ಆಡಳಿತ ಸಮರ್ಥ ಅನುಷ್ಠಾನಗೊಂಡರೂ ನಿರೀಕ್ಷಿತ ಮಟ್ಟದ ಫಲ ನೀಡಿಲ್ಲ. ಈ ಸಮಸ್ಯೆಗಳನ್ನು ಸರ್ಕಾರ ಜೀರ್ಣಿಸಿಕೊಂಡು ಇ–ಆಡಳಿತಕ್ಕೆ ಆದ್ಯತೆ ನೀಡಿದ ಪಕ್ಷದಲ್ಲಿ ಇ–ಆಡಳಿತ ರಾಜ್ಯದ ಅಭಿವೃದ್ಧಿ ಮಾನದಂಡವಾಗುವುದರಲ್ಲಿ ಯಾವುದೇ ಅನುಮಾನಗಳಿರುವುದಿಲ್ಲ.

**ಪರಾಮರ್ಶನ ಗ್ರಂಥಗಳು**


- ಬಾಬುಕುಮಾರ್ ಓ. (2022). *ಕರ್ನಾಟಕ ಸ್ಥಳೀಯ ಸರಕಾರಗಳ ಆಡಳಿತಾತ್ಮಕ ಅಭಿವೃದ್ಧಿಯಲ್ಲಿ ವಿದ್ಯಾನ್ಮಾನ ಆಡಳಿತತ ಪಾತ್ರ (ಚಿತ್ರದುರ್ಗ ಜಿಲ್ಲೆಯ ಒಂದು ಅಧ್ಯಯನ).* ಕುವೆಂಪು ವಿಶ್ವವಿದ್ಯಾಲಯ.

- ದೇವಯ್ಯ ಎನ್.ಜಿ ಮತ್ತು ಕೀರ್ತಿರಾಜ್. (2021). *ಇ–ಗೌರ್ನೆನ್ಸ್ ಇನ್ ಇಂಡಿಯಾ.* ಆರೆಂಜ್‌ಬುಕ್ಸ್ ಪಬ್ಲಿಕೇಶನ್ಸ್,

- ಮೇನಕ ತಮ್ಮಯ್ಯ. ಡಿ. (2023). *ಇ–ಗೌರ್ನೆನ್ಸ್ ಇನಿಟಿಯೆಟಿವ್ಸ್ ಇನ್ ಕರ್ನಾಟಕ ಎ ಕೇಸ್*

*ಸ್ಟಡೀಸ್ ಆಫ್ ಭೂಮಿ ಪ್ರಾಜೆಕ್ಟ್ ಇನ್ ಕೊಡಗು ಡಿಸ್ಟ್ರಿಕ್*. ಕ್ಲಾವರ್ ಫಕ್ಸ್ ಪಬ್ಲೀಷಿಂಗ್.

- ನಿರಂಜನ ಪಾಣಿ ಮತ್ತು ಸಂತಾಪ್ ಸಂಗರಿ ಮಿಶ್ರ. (2006). *ಇ–ಗೌರ್ನೆನ್ಸ್*. ಹಿಮಾಲಯ ಪಬ್ಲಿಕೇಶನ್ಸ್.
- ಸುರೇಶ್, ಕೆ.ಜಿ. (2006). ಅಭಿವೃದ್ಧಿ ಆಡಳಿತ. ಅಖಿಲಾ ಏಜೆನ್ಸಿಸ್.